<u>ದಿಃ **06.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಹೆಚ್.ಎಂ.ಬಿ ವಕೀಲರಿಂದಃ **4** ನೇ ಪ್ರತಿವಾದಿಯ ಪರವಾಗಿಃ</u>

**18)** ಸರ್ವೆ ನಂಬರಃ 188/2 ಈ ಆಸ್ತಿಗೆ ಸಂಬಂದಪಟ್ಟಂತೆ 1 ನೇ ಪ್ರತಿವಾದಿ ನಮ್ಮ ತಾಯಿಯಾದಂತಹ ಗಿರಿಜವ್ವ ಈಕೆ ಪ್ರತಿವಾದಿ ನಂಬರಃ 4 ಉಮೇಶ ಇವರಿಗೆ ನೊಂದಾಯಿತ ದಾನಪತ್ರ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ನೊಂದಾಯಿತ ದಾನಪತ್ರದ ಬಗ್ಗೆ ಈ ದಾವೆಯನ್ನು ಮಾಡುವ ಪೂರ್ವದಲ್ಲಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರಃ 188/2 ಈ ಅಸ್ತಿಗೆ ಸಂಬಂದಪಟ್ಟಂತೆ ನಮ್ಮ ತಾಯಿಯಾದಂತಹ ಗಿರಿಜವ್ವ ಈಕೆ 4 ನೇ ಪ್ರತಿವಾದಿಯಾದಂತಹ ಉಮೇಶ ಇವರಿಗೆ ದಿನಾಂಕಃ 08.11.2019 ನೇ ಇಸ್ವಿಯಂದು ಸದರಿ 4 ನೇ ಪ್ರತಿವಾದಿಗೆ ನೊಂದಾಯಿತ ದಾನ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಅಂದರೆ ಸರಿ. ಸಾಕ್ಷಿಯು ಮಜಂದುವರೆದು ಸದರಿ ದಾನಪತಲ್ರದ ಬಗ್ಗೆ ಈ ದಾವೆ ಮಾಡುವ ಪೂರ್ವದಲ್ಲಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ.

**19)** ಅದೇ ರೀತಿ ರಿ.ಸ.ನಂಬರಃ 5/4 ಈ ಆಸ್ತಿಗೆ ಸಂಬಂದಪಟ್ಟಂತೆ ನಮ್ಮ ತಾಯಿಯಾದಂತಹ 1 ನೇ ಪ್ರತಿವಾದಿ ಗಿರಿಜವ್ವ ಪ್ರತಿವಾದಿ ಶ್ರೀಮತಿ ಗೀತಾ ಇವರಿಗೆ ನೊಂದಾಯಿತ ದಾನಪತ್ರವನ್ನು ಕೊಟ್ಟಿರುತ್ತಾರೆ ಅಂದರೆ ಸಾಕ್ಷಿಯು ಸದರಿ ವಿಷಯ ನಮಗೆ ಈಗ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ನನಗೆ ನಮ್ಮ ತಾಯಿ ಪ್ರತಿವಾದಿ ನಂಬರಃ 4 ಮತ್ತು 5 ಇವರಿಗೆ ಎರಡು ಭಕ್ಷೀಸ ಪತ್ರಗಳನ್ನು ಮೇಲೆ ಹೇಳಿದ ದಾವಾ ಅಸ್ತಿಗಳಿಗೆ ಸಂಬಂದಪಟ್ಟಂತೆ ಬರೆದುಕೊಟ್ಟಿರುವ ವಿಷಯ ನನಗೆ ತಿಳಿದಿದ್ದರೂ ಸಹ ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಸಲ್ಲಿಸಿದ ದಾಖಲಾತಿಗಳ ಬಗ್ಗೆ ನನಗೆ

ಸಂಪೂರ್ಣ ಮಾಹಿತಿ ಇರುವದಿಲ್ಲ. ಜಲ್ಲಾಪುರ ಗ್ರಾಮದಲ್ಲಿರುವಂತಹ ಆಸ್ತಿಯಾದಂತಹ ಸರ್ವೆ ನಂಬರಃ 93 ಎ/2 ಎ ಪ್ಲಾಟ ನಂಬರಃ 22 ಇದನ್ನು ನಮ್ಮ ತಂದೆಯು ಖರೀದಿಗೆ ತೆಗೆದುಕೊಂಡಿರುತ್ತಾರೆ ಅಂದರೆ ಸರಿ. ಅದೇ ರೀತಿ ಸರ್ವೆ ನಂಬರಃ 23 ಪ್ಲಾಟ ನಂಬರಃ 22 ಈ ಆಸ್ತಿಯನ್ನು ಸಹ ನಮ್ಮ ತಂದೆಯು ಖರೀದಿಗೆ ತೆಗೆದುಕೊಂಡಿದ್ದಾನೆ ಅಂದರೆ ಸರಿ. ಸದರಿ ಆಸ್ತಿಯನ್ನು ಜಲ್ಲಾಪುರ ಗ್ರಾಮದಲ್ಲಿರುವ ಕುಲಕರ್ಣಿ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಅಂದರೆ ಸರಿ.

**20)** ಆ ನಂತರ ಸರ್ವೆ ನಂಬರಃ 93 ಎ/2 ಎ ಪ್ಲಾಟ ನಂಬರಃ 22 ಈ ಆಸ್ತಿಯನ್ನು ಜಲ್ಲಾಪುರ ಗ್ರಾಮದ ವೀರಪ್ಪ ಬಸಪ್ಪ ಶಿರಬಡಗಿ ಇವರಿಗೆ ಮಾರಾಟ ಮಾಡಿರುತ್ತಾನೆ ಅಂದರೆ ಸರಿ. ದಾವಾ ಆಸ್ತಿಯಾದಂತಹ ಸರ್ವೆ ನಂಬರಃ 23 ಪ್ಲಾಟ ನಂಬರಃ 21 ಪ್ರಸ್ತುತವಾಗಿ ನಾವೇ ವಾಸ ಮಾಡಿಕೊಂಡು ಬರುತ್ತಿದ್ದೇವೆ ಅಂದರೆ ಸರಿ. ನನ್ನ ವಾದ ಪತ್ರದಲ್ಲಿ ಬರೆದಿರುವಂತಹ ಸಂಪೂರ್ಣ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ. ನಮ್ಮ ತಂದೆ ಚೆನ್ನಬಸಪ್ಪ ಈತನ ಹೆಂಡತಿ ಗಿರಿಜವ್ವ ಇವರಿಬ್ಬರ ದಾಂಪತ್ಯ ಜೀವನದಿಂದ ಜನಿಸಿದ ಪ್ರಕಾಶ ಈತನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ.

**21)** ನಮ್ಮ ತಂದೆ ತಾಯಿಯಾದಂತಹ ಗಿರಿಜವ್ವ ಇವರಿಬ್ಬರ ವೈವಾಹಿಕ ಜೀವನ ಸರಿಯಾಗಿ ಇಲ್ಲದೇ ಇದ್ದುದರಿಂದ 1 ನೇ ಪ್ರತಿವಾದಿ ಗಿರಿಜವ್ವ ಸವಣೂರ ತಾಲೂಕಿನ ಹತ್ತಿಮತ್ತೂರಿನ ಗ್ರಾಮದಲ್ಲಿ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದಾಳೆ ಅಂದರೆ ಸರಿಯಲ್ಲ. ನಮ್ಮ ತಾಯಿಯ ಆರೋಗ್ಯ ಸರಿ ಇರದೇ ಇರುವದರಿಂದ ನಮ್ಮ ತಾಯಿಯನ್ನು ನಾನೇ ನೋಡಿಕೊಂಡು ಹೋಗುತ್ತಿದ್ದೇನೆ ಅಂದರೆ ಸರಿ. ನಮ್ಮ ತಾಯಿಯ ಆರೋಗ್ಯ ಸರಿ ಇಲ್ಲದೇ ಇದ್ದುದರಿಂದ ನಾನು ನಮ್ಮ ತಾಯಿಯನ್ನು ಯಾವ ಯಾವ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ ಎಂದು ಆ ಆಸ್ಪತ್ರೆಗಳ ಹೆಸರು ನನಗೆ ಗೊತ್ತಿರುವದಿಲ್ಲ. 1 ನೇ ಪ್ರತಿವಾದಿಯಾದಂತಹ ಗಿರಿಜವ್ವ ಯಾವತ್ತೂ ಕೂಡ ನನ್ನ ಮನೆಯಲ್ಲಿ ವಾಸ

ಇರುವದಿಲ್ಲ, ಆಕೆ 4 ನೇ ಪ್ರತಿವಾದಿಯಾದಂತಹ ಉಮೇಶ ಇವರ ಮನೆಯಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದಾಳೆ ಅಂದರೆ ಸರಿಯಲ್ಲ. 4 ನೇ ಪ್ರತಿವಾದಿಯಾದಂತಹ ಉಮೇಶ ಈತನೇ ಹಲವಾರು ಆಸ್ಪತ್ರೆಗಳಿಗೆ ತೋರಿಸಿ ಆಕೆಗೆ ಚಿಕಿತ್ಸೆಯನ್ನು ಕೊಡಿಸುತ್ತಿದ್ದಾನೆ ಅಂದರೆ ಸರಿಯಲ್ಲ. ನಮ್ಮ ತಾಯಿ 1 ನೇ ಪ್ರತಿವಾದಿ ಗಿರಿಜವ್ವ ಈಕೆ ನಮ್ಮ ಮನೆಯಲ್ಲಿ ಮೃತಪಟ್ಟಿದ್ದಾಳೆ. ನಮ್ಮ ತಾಯಿ 1 ನೇ ಪ್ರತಿವಾದಿ ಗಿರಿಜವ್ವ ಈಕೆ ನಮ್ಮ ಮನೆಯಲ್ಲಿ ಮೃತಪಟ್ಟಿಲ್ಲ ಅಂದರೆ ಸರಿಯಲ್ಲ. ನನಗೆ ಈ ಪ್ರಕರಣದಲ್ಲಿಯ ಎಲ್ಲ ವಿಷಯಗಳು ಸಂಪೂರ್ಣವಾಗಿ ಗೊತ್ತಿದ್ದರೂ ಸಹ ನಾನು ದಾಖಲಾತಿಗಳ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.